# *ಕರ್ನಾಟಕ ಲೋಕಾಯುಕ್ತ*

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ-816/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:31.3.2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ.ಹೆಚ್.ಹೆಚ್.ಬೋರಯ್ಯ ಬಿನ್ ಲೇಟ್ ಹನುಮಯ್ಯ, ಹುಲಿಗೆರೆಪುರ ಅಂಚೆ, ಎಂ.ಜಿ.ಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀ.ಹೆಚ್.ಹೆಚ್.ಬೋರಯ್ಯ ಬಿನ್ ಲೇಟ್ ಹನುಮಯ್ಯ, ಹುಲಿಗೆರೆಪುರ ಅಂಚೆ, ಎಂ.ಜಿ.ಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಶ್ರೀ. ಅರುಣಪ್ರಭ, ತಹಶೀಲ್ದಾರ್, ತಾಲ್ಲೂಕು ಚನ್ನಪಟ್ಟಣ, ರಾಮನಗರ ಜಿಲ್ಲೆ (2) ಶ್ರೀ.ಕೆ.ನಾಗರಾಜು, ವಿಷಯ ನಿರ್ವಾಹಕರು, ಅಭಿಲೇಖಾಲಯ ಶಾಖೆ, ತಹಶೀಲ್ದಾರ್ ರವರ ಕಛೇರಿ, ತಾಲ್ಲೂಕು ಚನ್ನಪಟ್ಟಣ, ರಾಮನಗರ ಜಿಲ್ಲೆ (3) ಶ್ರೀ.ಕೆ.ಮುತ್ತುರಾಜು, ನಿವೃತ್ತ ವಿಷಯ ನಿರ್ವಾಹಕರು, ತಹಶೀಲ್ದಾರ್ ರವರ ಕಛೇರಿ, ತಾಲ್ಲೂಕು ಚನ್ನಪಟ್ಟಣ, ರಾಮನಗರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ – ಅಬ್ಬೂರು ಗ್ರಾಮದ ಸ. ನಂ: 317, 71, 72 371, 374, 226, ಇನಾಂ ಅಲಿನೇಷನ್ ನಲ್ಲಿ ಡಿ.ಸಿ ರವರ ಆಧೇಶದ ಸಂಪೂರ್ಣ ಕಡತ ದೊರೆತಿಲ್ಲ ಅಂತ ಹೇಳಿ ಖಾತೆ ಮಾಡುತ್ತಿಲ್ಲ ಆದರೆ ಇದೇ ಸರ್ವೆ ನಂಬರ್‌ನ ಜಮಿನಿಗೆ ಸಂಬಂಧಪಟ್ಟ ಕಡತಗಳನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ವಿಶೇಷ ತಹಶೀಲ್ದಾರ್ ರವರು ಇನಾಂ ಅಭೀಲೇಷನ್ ಬೆಂಗಳೂರು ಉತ್ತರ ಇವರೂ ಸಹ ನನ್ನ ತಂದೆ ವ್ಯಾಸರಾಯಮಠದ ತೋಟಿ ಸೇವೆ

ಮಾಡುತ್ತಿದ್ದರಿಂದ ಇವರ ಹೆಸರಿಗೆ ಖಾತೆ ಮಾಡಲು ಆದೇಶ ಕೊಟ್ಟಿದ್ದಾರೆ. ಆದರೆ ಕೇಸ್ ನಂ: 74/59-60, 74/60-61 ಕಡತಗಳು ಸಿಕ್ಕಿಲ್ಲ ಅಂತ ಹಿಂಬರಹ ಕೊಡುತ್ತಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದುರುದಾರರಿಗೆ ಕಡತ ಸಿಕ್ಕಲ್ಲ ಅಂತ ಹಿಂಬರಹ ಕೊಟ್ಟಿರುವುದು ಸರಿಯಾಗಿದೆ. ಪ್ರತಿಗಳನ್ನು ಬೇರೆಯವರಿಗೆ ಕೊಟ್ಟ ಬಗ್ಗೆ ಯಾವುದೇ ದಾಖಲೆಗಳಿಲ್ಲ ಇನಾಂ ಅಬಾಲಿಷನ್ ಆಧೇಶ ಆಗಿದ್ದರೆ ಕಛೇರಿಯಲ್ಲಿ ಮೂಲ ಕಡತ ಲಭ್ಯವಿರಬೇಕು ಒಂದು ವೇಳೆ ದಾಖಲೆಗಳು ನೌಕರರ ಬೇಜವಾಬ್ದಾರಿಯಿಂದ ಕಳೆದಿದ್ದರೆ ಅವರ ಮೇಲೆ ಕಾನೂನಿನ ಕ್ರಮ ಜರುಗಿಸಿ ಮಿಸಿಂಗ್ ಕಡತ ತಯಾರಿಸಬೇಕಾಗುತ್ತದೆ. ಈ ಬಗ್ಗೆ ವಿಷಯನಿರ್ವಾಹಕರಿಗೆ ನೋಟೀಸು ಕೊಡಬೇಕಾಗುತ್ತದೆ. ಈ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ. ಎಂದು ಹೇಳುತ್ತಾರೆ. 3ನೇ ಎದುರುದಾರರು ತಾವು ದಿ: 31.5.2012ರಂದು ನಿವೃತ್ತ ರಾಗಿರುವುದಾಗಿಯೂ ತಾವು ಯಾವುದೇ ಕರ್ತವ್ಯನಿರ್ಲಕ್ಷ್ಯತನ ಮಾಡಿಲ್ಲ ಅಂತ ಹೇಳುತ್ತಾರೆ. 2ನೇ ಎದುರುದಾರರು ಈ ಕಡತವನ್ನು ಚಾರ್ಜ್ ನಲ್ಲಿ ನನ್ನ ಹಿಂದಿನ ವಿಷಯ ನಿರ್ವಾಹಕರು ಕೊಟಿಲ್ಲ ಅಂತ ಹೇಳುತ್ತಾರೆ.

4. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಕೆ.ಮುತ್ತರಾಜ್ ರವರು ನಾನು ಕಡತವನ್ನು ಸಿದ್ದರಾಜು ರವರಿಗೆ ಕೊಟ್ಟಿದ್ದೇನೆ ಅಂತ ಹೇಳುತ್ತಾರೆ. ಸಿದ್ದರಾಜು ನಿಮ್ಮ ತಂದೆ ಜಯಸ್ವಾಮಿ ತಂದೆ ಚಿಕ್ಕಮುದ್ದಯ್ಯ ಇವರ ಹಸ್ತೆ ಇದೆ ಅಂತ ಪೋನ್ ನಲ್ಲಿ ತಿಳಿಸಿದ್ದಾರೆ. ಸದರಿ ಜಯಸ್ವಾಮಿ ನನಗೆ ಫೋನ್ ಮಾಡಿ ಮುತ್ತುರಾಜು ಇವರಿಗೆ ತೊಂದರೆ ಕೊಡಬೇಡ ಅಂತ ಹೇಳಿದ್ದಾರೆ. ಹಾಗೂ ಹಲವಾರು ವಿಷಯಗಳನ್ನು ತಿಳಿಸಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಈ ದೂರು 2015ರಲ್ಲಿ ಸಲ್ಲಿಕೆಯಾಗಿದೆ. ದೂರುದಾರರು ಹಾಜರುಪಡಿಸಿರುವ ದಾಖಲೆಗಳಲ್ಲಿ ತಹಶೀಲ್ದಾರ್ ರವರು ಮಾನ್ಯ ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು ಇದರಲ್ಲಿ ವಿಷಯ ನಿರ್ವಾಹಕರಾದ ಮುತ್ತುರಾಜು ಇವರಿಗೆ 3.2.14 ಹಾಗೂ 25.2.2014ರಲ್ಲಿ ನೋಟೀಸು ಕೊಡಲಾಗಿದೆ. ಅವರು ಬಂದು ಕಡತ ಹುಡುಕಿಕೊಟ್ಟಿರುವುದಿಲ್ಲ. ಹಿಂದಿನ ಅಭಿಲೇಖಾಲಾಯ ಶಾಖೆಯ ವಿಷಯ ನಿರ್ವಾಹಕರು ಚಾರ್ಜ್ ಪಟ್ಟಿಯಲ್ಲಿ ಕಡತ ನೀಡಿರುವುದಿಲ್ಲ ಅಂತ ತಿಳಿಸಿದ್ದು ಕಂಡುಬರುತ್ತದೆ. ವಿಷಯ ಹೀಗಿರುವಾಗ 4 ವರ್ಷಗಳೊಳಗಾಗಿ 3ನೇ ಎದುರುದಾರರ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ 1ನೇ ಎದುರುದಾರರು ಕೇವಲ ನೋಟೀಸುಗಳನ್ನು ಮಾತ್ರ ಕೊಟ್ಟಿದ್ದಾರೆ. ಅವರು ಕಡತಗಳನ್ನು ಹುಡುಕಿಕೊಡದೇ ಇದ್ದರೂ ಸಹ ತಕ್ಷಣ ಕಾರ್ಯಪ್ರವೃತ್ತರಾಗಿಲ್ಲ ನಿಯಮ 214(2) (ಬಿ) ಅಡಿಯಲ್ಲಿ ತಕ್ಷಣ ಕ್ರಮ ಕೈಗೊಂಡಿದ್ದಲ್ಲಿ

ಯಾವುದಾದರೂ ಇತ್ಯಾರ್ಥವಾಗುತ್ತಿತ್ತು ಮತ್ತು 3ನೇ ಎದುರುದಾರರು ತಪ್ಪಿತಸ್ಥರೇ ಅಥವಾ ಇಲ್ಲವೇ ಅಂತ ನಿರ್ಣಯವಾಗುತ್ತಿದ್ದು ದಿ: 31.5.2016ರಂದು 3ನೇ ಎದುರುದಾರರು ನಿವೃತ್ತರಾಗಿ 4 ವರ್ಷಗಳಾಗಿದ್ದು ನಾಗರಾಜು ಇವರಿಗೆ ಕಡತವನ್ನು ಹಸ್ತಾಂತರಿಸಿಲ್ಲ ಎನ್ನುವುದು ಚಾರ್ಜ್ ಪಟ್ಟಿಯಿಂದ ಗೊತ್ತಾದ ತಕ್ಷಣ ಯಾವುದೇ ಶಿಸ್ತು ಕ್ರಮ ತೆಗೆದುಕೊಳ್ಳದೆ 1ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಶಿಸ್ತು ಕ್ರಮ ಜರುಗಿಸಲು ಮುಂದಿನ ಕ್ರಮಕ್ಕೆ ಕಳುಹಿಸಲಾಗುವುದು ಎಂದು 2ನೇ ಎದುರುದಾರರು ದಿ: 6.7.2015ರಂದು 3ನೇ ಎದುರುದಾರರಿಗೆ ನೋಟೀಸು ಕೊಟ್ಟಿದ್ದಾರೆ. ಆದರೆ ಇದುವರೆಗೆ ಯಾವುದೇ ಕ್ರಮ ಕೈಗೊಂಡಂತೆ ಕಾಣುವುದಿಲ್ಲ

6. ಆದ್ದರಿಂದ 1 ಮತ್ತು 2ನೇ ಎದುರುದಾರರು 2014 ರಿಂದಲೂ ದೂರುದಾರರ ತಂದೆಗೆ ಸಂಬಂಧಿಸಿದ ಕಡತವು ಮುಂದಿನ ವಿಷಯ ನಿರ್ವಾಹಕರಿಗೆ ಚಾರ್ಜ್‌ಪಟ್ಟಿಯಲ್ಲಿ ಕೊಟ್ಟಿಲ್ಲ ಅಂತ ಗೊತ್ತಿದ್ದರೂ ಸಹ ಇದುವರೆಗೆ ಯಾವುದೇ ಕ್ರಮವನ್ನು ಜರುಗಿಸದೆ ಕರ್ತವ್ಯಲೋಪವೆಸಗಿದ್ದಾರೆ.

7. 1ನೇ ಎದುರುದಾರರು ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಮಿಸಿಂಗ್ (missing) ಕಡತವನ್ನು ತಯಾರಿಸಲು ಕ್ರಮ ಜರುಗಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

31-3-17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.